ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN ; U40109KA2004SGC035177
ನೊಂದಾಯಿತಕಛೇರಿ ವಿಳಾಸ ನಂ 29
ಕಾವೇರಿಗ್ರಾಮಿಣ ಬ್ಯಾಂಕ್‌ರಸ್ತೆ
ವಿಜಯನಗರ 2 ನೇಹಂತ ಮೈಸೂರು-570017
ನಿಗಮ ಇ-ಮೇಲ್ :WWW.CESCMYSORE.ORG
email:aeehun@cescmysore.org

ಸಹಾಯಕಕಾರ್ಯನಿರ್ವಾಹಕಇಂಜಿನಿಯರ್(ವಿ)
ರವರಕಛೇರಿ ಕಾ ಮತ್ತು ಪಾ ಉಪ ವಿಭಾಗ
ಚಾ.ವಿ.ಸ.ನಿ.ನಿ., ಹುಣಸೂರು
Ph.: 08222 – 252056

ಸಂಖ್ಯೆ:ಸಕಾನಿಇಂ(ವಿ)/ಹುಣ/ಸಇಂ(ತಾ)/2021-22/ 2616 ದಿನಾಂಕ: 6/1/22

ದಿನಾಂಕ 24-12-2021 ರಂದು ಬೆಳಗ್ಗೆ 11.00 ಗಂಟೆಗೆ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಶ್ರೀ ಸುನೀಲ್ ಕುಮಾರ್ ರವರ ಅಧ್ಯಕ್ಷತೆಯಲ್ಲಿ ನಡೆದ ಹುಣಸೂರು ಕಾರ್ಯ ಮತ್ತು ಪಾಲನ ಉಪವಿಭಾಗದ ಮೂರನೆ ತ್ರೈಮಾಸಿಕದ ಗ್ರಾಹಕರ ಸಂಪರ್ಕ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು

1. ಶ್ರೀ ಸುನೀಲ್ ಕುಮಾರ್ ರವರು, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ ಹುಣಸೂರು
2. ಶ್ರೀ ಸಿದ್ದಪ್ಪ ರವರು, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹುಣಸೂರು
3. ಶ್ರೀ ಯಶಸ್ವಿನಿ ಆರ್ ಶೇಖರ್, ಪ್ರಭಾರ ಸಹಾಯಕ ಇಂಜಿನಿಯರ್(ತಾ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹುಣಸೂರು.
4. ಶ್ರೀ ದೀಪಿಕಾ, ಪ್ರಭಾರ ಹಿರಿಯ ಸಹಾಯಕ, ಕಂದಾಯ ಶಾಖೆ, ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹುಣಸೂರು.
5. ಶ್ರೀ ಸೋಮಶೇಖರ್, ಸಹಾಯಕ ಇಂಜಿನಿಯರ್(ವಿ), ಪಟ್ಟಣ ಶಾಖೆ ಹುಣಸೂರು.
6. ಶ್ರೀ ಮಲ್ಲಪ್ಪ, ಕಿರಿಯ ಇಂಜಿನಿಯರ್ (ಪ್ರಭಾರ), ಶಾಖಾಧಿಕಾರಿಗಳು ಬಿಳ್ಕುಂದ ಶಾಖೆ.
7. ಶ್ರೀ ರಾಘವ್, ಕಿರಿಯ ಇಂಜಿನಿಯರ್, ಶಾಖಾಧಿಕಾರಿಗಳು ಗೋವಿಂದನಹಳ್ಳಿ ಶಾಖೆ.
8. ಶ್ರೀ ವಿಜಯಕುಮಾರ್, ಕಿರಿಯ ಇಂಜಿನಿಯರ್ (ವಿ), ಶಾಖಾಧಿಕಾರಿಗಳು ಹನಗೂಡು ಶಾಖೆ.
9. ಶ್ರೀ ಎಸ್. ರವಿ, ಕಿರಿಯ ಇಂಜಿನಿಯರ್(ಪ್ರಭಾರ), ಶಾಖಾಧಿಕಾರಿಗಳು ಗಾವಡಗೆರೆ ಶಾಖೆ.
10. ಶ್ರೀ ಪ್ರಸನ್ನ ಕುಮಾರ್, ಕಿರಿಯ ಇಂಜಿನಿಯರ್ (ವಿ), ಶಾಖಾಧಿಕಾರಿಗಳು ರತ್ನಪುರಿ ಶಾಖೆ.

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು.

ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ವಿದ್ಯುತ್ ಗ್ರಾಹಕ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದ್ವಯ ಪ್ರತಿ ತಿಂಗಳ ಮೂರನೆ ಶನಿವಾರದ ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆಂದು ಸಭೆಗೆ ತಿಳಿಸಿದರು.

ಮುಂದುವರೆದು ಪ್ರಸ್ತುತ ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಂದ ದೂರುಗಳನ್ನು ಸ್ವೀಕರಿಸಲಾಗಿ ಇದರ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | ಬಿ.ಎಸ್ ಶಶಿಕಲಾ ಕೋಂ ಕೆ.ಎಸ್ ನಾಗೇಂದ್ರ, ಹೊಸ ಸಾಕೇತ ಬಡಾವಣೆ | ಅನಧೀಕೃತ ಬಡಾವಣೆಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಗ್ರಾಹಕರಿಗೆ ಬಡಾವಣೆಗೆ ಸಂಬಂಧಿಸಿದಂತೆ ಸೂಕ್ತ ದಾಖಲೆಗಳನ್ನು ಸಲ್ಲಿಸಲು ತಿಳಿಸಿದರು. |
| 2. | ನಳಿನಿಬಾಯಿ ಕೋಂ ಲೇ॥ ಕೃಷ್ಣರಾವ್ ಶಿಂಧೆ, ಮಧುಕರ್ ಬಡಾವಣೆ | ಅನಧೀಕೃತ ಬಡಾವಣೆಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಗ್ರಾಹಕರಿಗೆ ಬಡಾವಣೆಗೆ ಸಂಬಂಧಿಸಿದಂತೆ ಸೂಕ್ತ ದಾಖಲೆಗಳನ್ನು ಸಲ್ಲಿಸಲು ತಿಳಿಸಿದರು. |
| 3. | ರಾಜಾ ಬಿನ್ ಮುತ್ತಮ್ಮ, ಬಾಚಳ್ಳಿ ರಸ್ತೆ, ಚಿಕ್ಕ ಹುಣಸೂರು | ಮನೆಗೆ ವಿದ್ಯುತ್ ಸಂಪರ್ಕ ನೀಡುವ ಬಗ್ಗೆ ಹಾಗೂ ಅಕ್ರಮವಾಗಿ ನಿರ್ಮಿಸಿರುವ ಮನೆಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸುವ ಬಗ್ಗೆ | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ಗೋವಿಂದನಹಳ್ಳಿ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ವರದಿ ನೀಡುವಂತೆ ಸೂಚಿಸಿದರು. |
| 4. | ವಿ. ರವಿಕುಮಾರ್, ಹುಣಸೂರು | ತಾತ್ಕಲಿಕ ಸ್ಥಾವರಗಳ ಅಡ್ಜಸ್ಟ್‌ಮೆಂಟ್ ಅನ್ನು ಮಾಡಿಸುವ ಬಗ್ಗೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ಹಿರಿಯ ಸಹಾಯಕರಿಗೆ ತಾತ್ಕಲಿಕ ಸ್ಥಾವರಗಳ ಅಡ್ಜಸ್ಟ್‌ಮೆಂಟ್ ಅನ್ನು ಶೀಘ್ರವಾಗಿ ಮಾಡುವಂತೆ ಸೂಚಿಸಿದರು. |
| 5. | ಚಂದ್ರಶೇಖರ್, ಹರಳಹಳ್ಳಿ | ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ ಹಾಗೂ ಕಂಬವನ್ನು ಸ್ಥಳಾಂತರಿಸುವ ಬಗ್ಗೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಹನಗೋಡು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ವರದಿ ನೀಡುವಂತೆ ಸೂಚಿಸಿದರು. |
| 6. | ಗಜೇಂದ್ರ, ಗಾವಡಗೆರೆ | ಹಾಳಿ ಇರುವ ಪರಿವರ್ತಕಕ್ಕೆ, ಹೆಚ್ಚುವರಿ ಪರಿವರ್ತಕವನ್ನು ಅಳವಡಿಸುವ ಬಗ್ಗೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ಗಾವಡಗೆರೆ ಶಾಖಾಧಿಕಾರಿಗಳಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸುವ ಬಗ್ಗೆ. |
| 7. | ಸಂಜಯ್, ನಾಗಾಪುರ ಹಾಡಿ, ಒಂದನೇ ಬ್ಲಾಕ್ | ನಿರಂತರ ಜ್ಯೋತಿ ಕಲ್ಪಿಸುವ ಬಗ್ಗೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಹನಗೋಡು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ಅಂದಾಜು ಪಟ್ಟಿಯನ್ನು ಸಲ್ಲಿಸಲು ಸೂಚಿಸಿದರು. |
| 8. | ದಿವಾಕರ್, ಚಿಲ್ಕುಂದ | ಕಬ್ಬಿಣದ ಮಾಪಕವನ್ನು ಬದಲಾಯಿಸುವ ಬಗ್ಗೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ಚಿಲ್ಕುಂದ ಶಾಖಾಧಿಕಾರಿಗಳಿಗೆ ಮಾಪಕವನ್ನು ಬದಲಾಯಿಸುವಂತೆ ಸೂಚಿಸಿದರು. |

| | | | |
|---|---|---|---|
| 9. | ಸಿದ್ದೇಶ್,<br>ಅತ್ತಿಗುಪ್ಪೆ | | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), |
| 10. | ಚಂದ್ರಶೇಖರ್,<br>ಮೂಕನಹಳ್ಳಿ | ನಿರಂತರ ಜ್ಯೋತಿ ಕಲ್ಪಿಸುವ ಬಗ್ಗೆ ಹಾಗೂ ದುರಸ್ತಿಯಾದ ಕಂಬವನ್ನು ಬದಲಾಯಿಸಿ ಕೊಡುವ ಬಗ್ಗೆ | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ಗೋವಿಂದನಹಳ್ಳಿ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ಅಂದಾಜು ಪಟ್ಟಿಯನ್ನು ಸಲ್ಲಿಸಲು ಸೂಚಿಸಿದರು. |
| 11. | ಸತೀಶ್,<br>ಸಣ್ಣೇನಹಳ್ಳಿ | ಅಭಿವೃದ್ಧಿ ಶುಲ್ಕದ ಕುರಿತು ಮಾಹಿತಿ ನೀಡುವ ಬಗ್ಗೆ | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಮಾಹಿತಿಯನ್ನು ಒದಗಿಸಲು ಸೂಚಿಸಿದರು. |

ಸಭೆಯ ಕೊನೆಯಲ್ಲಿ ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ರವರು ವಿದ್ಯುತ್ ಗ್ರಾಹಕರಿಂದ ಕೇಳಿ ಬಂದಂತಹ ದೂರುಗಳು ಹಾಗೂ ಕುಂದು ಕೊರತೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಭಂದಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ಅಧಿಕಾರಿಗಳಿಗೆ ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಸ್ಥಳ ಪರೀಶಿಲಿಸಿ ನಿಯಾಮನುಸಾರ ಕ್ರಮಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಭೆಯಲ್ಲಿ ಹಾಜರಿದ್ದವರ ಸಂಖ್ಯೆ :- 25

ಮೌಖಿಕ ದೂರುಗಳ ಸಂಖ್ಯೆ :- 11

ಪತ್ರ ಲಿಖಿತ ದೂರುಗಳ ಸಂಖ್ಯೆ :- 0

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾವಿಸನಿನಿ., ಹುಣಸೂರು.

ಪ್ರತಿಗಳು:-

1. ಮಾನ್ಯ ಅಧೀಕ್ಷಕ ಇಂಜಿನಿಯರ್ (ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ಮೈಸೂರು ವೃತ್ತ ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ವಿಭಾಗ, ಹುಣಸೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಛೇರಿ ಪ್ರತಿ.